# ಚಿಂತನೆ ಮತ್ತು ಜೀವನ

“ಯಾವುದೇ ಚಿಂತೆಯಿರಬಾರದು ಜೀವನದಲ್ಲಿ. ಸದಾ ನಾವು ಗೊಂದಲವಿಲ್ಲದ, ಸಮಸ್ಯೆಯಿಲ್ಲದ ಬದುಕನ್ನು ಬದುಕಬೇಕು. ಮನುಷ್ಯನಿಗೆ ಸುಖ, ಸಂತೋಷ, ನೆಮ್ಮದಿ ದೊರಕುವುದು ಹಣ, ಸೊತ್ತು, ಕೀರ್ತಿ, ಅಧಿಕಾರಗಳಿಂದಲ್ಲ; ಅದು ಚಿಂತೆಯಿಲ್ಲದ, ಶಾಂತವಾದ ಜೀವನದಿಂದ.” — ಇದು ಸಮಾಜದಲ್ಲಿ ಪದೇ ಪದೇ ಕೇಳಿ ಬರುವ ವಿವೇಕದ ಮಾತು. ಇದು ಎಲ್ಲರ ಆದರ್ಶ, ಎಲ್ಲರ ಜೀವನದ ಗುರಿಯೂ ಹೌದು. ಆದರೆ ವಾಸ್ತವದಲ್ಲಿ ಮನುಷ್ಯನಿಗೆ ಯಾವ ಚಿಂತೆಯೂ ಇಲ್ಲದ, ಎಲ್ಲವೂ ಸುಖಮಯವಾದ ಅವಸ್ಥೆಯೆಂಬುದು ಇಲ್ಲವೇ ಇಲ್ಲ. ಬದಲಾಗಿ, ತನ್ನ ಚಿಂತೆಯನ್ನು ‘ಚಿಂತನೆ’ಯಾಗಿ ಮಾರ್ಪಡಿಸಿಕೊಂಡು, ಅದನ್ನು ಉನ್ನತವಾದ ಇನ್ನೊಂದು ನೆಲೆಗೆ ಏರಿಸಿಕೊಂಡವರಿದ್ದಾರೆ. ಜೀವನದ ಅರ್ಥವನ್ನು ಅವರು ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ.

ನಾವು ಎಷ್ಟೇ ನಿಶ್ಚಿಂತೆಯಿಂದ ಇದ್ದರೂ, ಅಥವಾ ಹಾಗೆಂದು ಭಾವಿಸಿಕೊಂಡರೂ, ಕೆಲವೊಂದು ಮೂಲಭೂತ ಸಂಗತಿಗಳ ಬಗ್ಗೆ ಆಳವಾಗಿ ಒಂದಲ್ಲ ಒಂದು ಸಂದರ್ಭದಲ್ಲಿ ಆಲೋಚಿಸಬೇಕಾಗುತ್ತದೆ. ಇವು ಪ್ರತಿಯೊಬ್ಬ ವ್ಯಕ್ತಿಯನ್ನೂ ಕಾಡುವ ಪ್ರಶ್ನೆಗಳಾಗಿವೆ; ಅವುಗಳಿಗೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನ ನಿರಂತರ ನಡೆಯುತ್ತಲೇ ಇರುತ್ತದೆ. ಏಕೆಂದರೆ, ಇಂಥ ‘ಕಾಡುವ ಪ್ರಶ್ನೆ’ಗಳಿಗೆ ನಿರ್ದಿಷ್ಟ ಉತ್ತರವೆಂಬುದೇ ಇರುವುದಿಲ್ಲ. ಅನಾದಿ ಕಾಲದಿಂದಲೂ ಇವುಗಳಿಗೆ ಉತ್ತರ ಹುಡುಕುವ ಪ್ರಯತ್ನಗಳಷ್ಟೇ ನಡೆದಿವೆ. ಇವು ಮಾನವನ ಅರಿವಿನ ಮಿತಿಗೆ ನಿಲುಕದ ಸಂಗತಿಗಳು. ಇವುಗಳಲ್ಲಿ ಕೆಲವು ಪ್ರಶ್ನೆಗಳು ಹೀಗಿವೆ: ನಮ್ಮ ಜೀವನ ಯಾತಕ್ಕಾಗಿ? ಸತ್ತ ಮೇಲೆ ಏನಾಗುವುದು? ಈ ಸೃಷ್ಟಿ ಹೇಗೆ ಅಸ್ತಿತ್ವಕ್ಕೆ ಬಂತು? ಕಾಣುವ ಜಗತ್ತಿನಾಚೆಗೆ ಒಂದು ಶಕ್ತಿ ನಿಜವಾಗಿಯೂ ಇದೆಯೆ? — ಇತ್ಯಾದಿ.

### ಜೀವನದ ಪ್ರಶ್ನೆ

ಈ ಪ್ರಶ್ನೆಗಳಲ್ಲಿ ಮೊದಲನೆಯದು ನಮ್ಮ ಜೀವನವನ್ನು ಕುರಿತು. ನಮ್ಮ ಜೀವನದ ಉದ್ದೇಶವೇನು? ಇದನ್ನು ಕುರಿತು ಚಿಂತಿಸುವುದು ಮಾನವ ಮಾತ್ರ. ಪ್ರಾಣಿ ಪಕ್ಷಿಗಳಿಗೆ, ಇತರ ಜೀವಿಗಳಿಗೆ ಈ ಕುರಿತ ಚಿಂತನೆಗೆ ಸಾಧ್ಯವೇ ಇಲ್ಲ. ಮಾನವನು ತಾನು ಕಂಡ ಪ್ರತಿಯೊಂದನ್ನು ಕುರಿತು ಚಿಂತಿಸಬೇಕು, ಅರಿತು ಅರ್ಥ ಮಾಡಿಕೊಳ್ಳಬೇಕು; ಅರ್ಥವಾಗದಿದ್ದರೆ ಅದರ ಆಳಕ್ಕಿಳಿದು, ತನ್ನ ಬುದ್ಧಿಯ ಮೂಲಕ ಅದರ ವಿಶ್ಲೇಷಣೆ ಮಾಡಿ ಹೊಸ ಅಂಶಗಳನ್ನು ಕಂಡುಕೊಳ್ಳಬೇಕು. ಉತ್ತರ ಕಂಡುಕೊಳ್ಳುವ ತನಕವೂ ಮಾನವನ ಮನಸ್ಸು ವಿರಮಿಸುವುದಿಲ್ಲ. ಈ ಪ್ರವೃತ್ತಿಯೇ ಮಾನವನ ವಿಕಸನದ ನಾಗಾಲೋಟಕ್ಕೆ ಕಾರಣವಾಗಿವೆ.

ಮಾನವನು ತನ್ನ ಜೀವನಕ್ಕೆ ಸಂಬಂಧಪಟ್ಟಂತೆ ಹಲವು ಪ್ರಶ್ನೆಗಳಿಗೆ ಹಲವು ಉತ್ತರಗಳನ್ನು ಕಂಡುಕೊಂಡಿದ್ದಾನೆ. ಇತಿಹಾಸವಿನ್ನೂ ಹೊಗಲಾರದಷ್ಟು ಪ್ರಾಚೀನ ಕಾಲದಿಂದಲೂ ಈ ಅನ್ವೇಷಣೆ ಆರಂಭವಾಗಿದೆ, ಹಲವು ಬಗೆಯ ಉತ್ತರಗಳೂ ಲಭಿಸಿವೆ. ಆದರೂ ಮಾನವನಿಗೆ ಪೂರ್ಣ ತೃಪ್ತಿ ಇನ್ನೂ ದೊರಕಿಲ್ಲ. ಇದರರ್ಥ — ತಾನು ಕಂಡ ಉತ್ತರ ಇನ್ನೂ ಪರಿಪೂರ್ಣವಾಗಿಲ್ಲ ಎಂದೆ? ಅಥವಾ ಉತ್ತರಗಳು ತಿಳಿದಷ್ಟೂ, ಅರಿಯದೆ ಉಳಿದ ಇನ್ನಿತರ ಪ್ರಶ್ನೆಗಳು ಉಳಿದಿವೆ ಎಂದೆ? — ಹಾಗಿದ್ದರೆ, ಅರ್ಥವಾಗದ ಪ್ರಶ್ನೆಗಳಿಗೆ ಕೊನೆಯೇ ಇಲ್ಲವೆ?

### ವೈಯಕ್ತಿಕ ನೆಲೆ - ಸಾಮೂಹಿಕ ನೆಲೆ

ಇಲ್ಲಿ ಒಂದು ವಿಚಿತ್ರ ಸಂಗತಿಯನ್ನು ನಾವು ಗಮನಿಸಬೇಕು. ಒಟ್ಟು ಮಾನವ ಜನಾಂಗವು ವೈಯಕ್ತಿಕವಾಗಿ ಚಿಂತಿಸುವುದಾದರೂ, ಅದಕ್ಕೆ ಸಾಮೂಹಿಕವಾದ ಒಂದು ಮುಖವೂ ಇದೆ ಎಂದು. ನನ್ನ ಪಾಡಿಗೆ ನಾವು ಪ್ರಪಂಚ, ಜೀವನ, ಕಾಲ, ನಿಯಮ, ಸಮಸ್ಯೆ — ಇತ್ಯಾದಿ ವಿಚಾರಗಳ ಬಗ್ಗೆ ಚಿಂತಿಸಿ ಏನೇನೋ ಸಂಗತಿಗಳನ್ನು ಕಂಡುಕೊಳ್ಳಬಹುದು. ಆದರೆ ಅದು ಅಲ್ಲಿಗೇ ನಿಲ್ಲಲಾರದು. ನನ್ನ ಆಪ್ತರೊಂದಿಗೆ ಅದನ್ನು ಕುರಿತು ಚರ್ಚಿಸುತ್ತೇನೆ. ಅವರೂ ಅದಕ್ಕೆ ತಮ್ಮ ಆಲೋಚನೆಗಳನ್ನು ಹರಿಯಬಿಡುತ್ತಾರೆ. ಅಥವಾ ನಾನು ನನ್ನ ಮನಸ್ಸಿನಲ್ಲಿ ಮೂಡಿ ಬಂದುದನ್ನು ಬರಹದ ರೂಪಕ್ಕೆ ಇಳಿಸುತ್ತೇನೆ. ಅದನ್ನು ಓದಿದವರು, ಅದಕ್ಕೆ ತಮ್ಮ ಚಿಂತನೆಯನ್ನೂ ಸೇರಿಸಿ ಸಮಾಜದ ‘ಸಾಮೂಹಿಕ ಜಗತ್ತಿ’ಗೆ ಅದನ್ನು ಹರಿಯಬಿಡುತ್ತಾರೆ. (ಇತ್ತೀಚೆಗೆ ಇದನ್ನೇ ‘ವೈರಲ್ ಆಗುವುದು’ ಎನ್ನುತ್ತಾರೆ). ಹಿಂದೆ ಸಂವಹನ ಮಾಧ್ಯಮಗಳು ಇಲ್ಲದ ದಿನಗಳಲ್ಲಿ ಈ ರೀತಿ ವೈಯಕ್ತಿಕ ಚಿಂತನೆ ಸಾಮೂಹಿಕಗೊಳ್ಳಲು ಸಮಯ ಬೇಕಾಗುತ್ತಿತ್ತು. ವ್ಯಕ್ತಿ-ವ್ಯಕ್ತಿಗಳ ನಡುವಿನ ವಿಚಾರ-ವಿನಿಮಯಗಳೇ ಇದಕ್ಕೆ ಪ್ರಮುಖ

ಮಾಧ್ಯಮವಾಗಿತ್ತು. ಪತ್ರಿಕೆ, ಟಿ.ವಿ. ಮುಂತಾದ ಮಾಧ್ಯಮಗಳು ಬಂದ ನಂತರ ಇದು ಕ್ಷಿಪ್ರವಾಗಿ ಹರಡತೊಡಗಿದೆ. ಅಂತರ್ಜಾಲ ಮಾಧ್ಯಮಗಳ ಆವಿಷ್ಕಾರವಾದ ನಂತರ ಇದೇ ವಿನಿಮಯ ಅತಿ ವೇಗವಾಗಿದೆ; ಆದ್ದರಿಂದಲೇ 'ವೈರಲ್' ಎನಿಸಿಕೊಂಡಿದೆ.

### ಚಿಂತನೆಗಳ ಪ್ರಭಾವ

ಚಿಂತನೆ ವೈಯಕ್ತಿಕ ನೆಲೆಯಲ್ಲಿ ನಡೆಯುವಷ್ಟು ಕಾಲ ಅದು ಖಚಿತವೂ, ನಿರ್ದಿಷ್ಟವೂ, ತರ್ಕಬದ್ಧವೂ ಆಗಿರುತ್ತವೆ. ಅಲ್ಲಿ ಗೊಂದಲಗಳು ಕಡಿಮೆ. ವ್ಯಕ್ತಿ-ವ್ಯಕ್ತಿಗಳ ನಡುವೆ ಚರ್ಚೆ ನಡೆಯುವಾಗ ಅನೇಕ ಹೊಸ ವಿಚಾರಗಳ ಘರ್ಷಣೆ ನಡೆದು, ಚಿಂತನ-ಮಂಥನಗಳಿಂದ ಅನೇಕ ಹೊಸ ವಿಚಾರಗಳು ಹೊರಬರುತ್ತವೆ. ಈ ವಿಚಾರಗಳು ಬರಹರೂಪಕ್ಕಿಳಿದಾಗ, ಅನೇಕ ವೇಳೆ ಅವು ಇನ್ನಷ್ಟು ಖಚಿತಗೊಳ್ಳುತ್ತವೆ; ಕೆಲವೊಮ್ಮೆ ಗೊಂದಲವನ್ನೂ ಸೃಷ್ಟಿಸುತ್ತವೆ. ಸುದ್ದಿ ಮಾಧ್ಯಮ, ಸಾಮಾಜಿಕ ಜಾಲತಾಣಗಳ ಹಂತಕ್ಕೆ ಬಂದಾಗ ಈ ಗೊಂದಲ ಇನ್ನಷ್ಟು ಹೆಚ್ಚಾಗಿ, ಆಲೋಚನೆಗಳ ಖಚಿತತೆ ಬಹುಭಾಗ ಇಲ್ಲದಾಗುತ್ತದೆ. ಆದರೆ ಒಂದು ಅಂಶವನ್ನು ನಾವು ವಿಶೇಷವಾಗಿ ಗಮನಿಸಬೇಕು: ವೈಯಕ್ತಿಕ ನೆಲೆಯ ಆಲೋಚನೆಗಳು ಶಕ್ತಿಯುತವಾಗಿದ್ದಷ್ಟೂ ಅವು ಹೆಚ್ಚು ಹೆಚ್ಚು ಸಾಮೂಹಿಕ ನೆಲೆಯಲ್ಲಿ ಪ್ರಚಾರಗೊಳ್ಳುತ್ತವೆ. ಸಮಾಜ ಅದನ್ನು ಸ್ವೀಕರಿಸುತ್ತದೆ. ಅದರ ಖಚಿತತೆ, ಶುದ್ಧರೂಪ ಹಾಗೂ ನಿರ್ದಿಷ್ಟತೆ ಉಳಿದುಕೊಳ್ಳುತ್ತದೆ. ಒಂದು ವೇಳೆ ಸಾಮೂಹಿಕ ನೆಲೆಯಲ್ಲಿ ಗೊಂದಲವುಂಟಾದರೂ, ಜನರು ಮತ್ತೆ ವೈಯಕ್ತಿಕ ನೆಲೆಯ ಮೂಲರೂಪದ ಚಿಂತನೆಗೆ ಮರಳಲು ಯತ್ನಿಸುತ್ತಾರೆ.

ಜೀವನದಲ್ಲಿ ಸಾಧಾರಣ ವಿಚಾರಗಳನ್ನು ಬಿಟ್ಟರೆ, ಮೂಲಭೂತ ಪ್ರಶ್ನೆಗಳನ್ನು ಕುರಿತು ಚಿಂತಿಸುವವರು ಕೆಲವರು ಮಾತ್ರ. ಆದರೆ ಅವರ ಆಲೋಚನೆಗಳು ಎಷ್ಟೊಂದು ಪ್ರಬಲವಾಗಿರುತ್ತವೆ ಎಂದರೆ, ಇಡೀ ಸಮಾಜ ಅಥವಾ ಸಮುದಾಯ ಅವರ ಪ್ರಭಾವಕ್ಕೊಳಗಾಗಿ, ಅದನ್ನು ಸ್ವೀಕರಿಸಿ, ಅಂತೆಯೇ ಚಿಂತಿಸಲಾರಂಭಿಸುತ್ತದೆ. ಈ ರೀತಿ ಕೆಲವು ತಲೆಮಾರುಗಳವರೆಗೂ ಇಂತಹ ಪ್ರಭಾವ ಮುಂದುವರಿಯುವುದು. ಸಾಮಾನ್ಯವಾಗಿ ಅಂತಹ ಪ್ರಭಾವಶಾಲಿಯಾದ ಚಿಂತನೆ ಹೊಮ್ಮುವುದು ಸಮಾಜವನ್ನು ಮುನ್ನಡೆಸುವ ಮಹಾವ್ಯಕ್ತಿಗಳ ಮೂಲಕ. ಅವರು ಪ್ರವಾದಿಗಳೋ, ಸಂತರೋ, ಅವತಾರ ಪುರುಷರೋ, ಅಥವಾ ಇತಿಹಾಸವನ್ನೇ ಬದಲಾಯಿಸಬಲ್ಲ ಜನನಾಯಕರೋ ಆಗಿರಬಹುದು. ಸಾಹಿತಿ, ತತ್ತ್ವಜ್ಞಾನಿ, ಕಲಾವಿದ ಮುಂತಾದವರ ಮನಸ್ಸುಗಳೂ ಅಷ್ಟೇ ಪ್ರಭಾವಶಾಲಿಯಾಗಿರುತ್ತದೆ — ಆದರೆ ಸೀಮಿತ ವಲಯದಲ್ಲಿ ಮಾತ್ರ.

### ಜೀವನ ಯಾತಕ್ಕಾಗಿ?

ಈ ಮೇಲಿನ ವಿಚಾರಗಳಿಂದ ತಿಳಿದು ಬರುವ ಒಂದು ಸಂಗತಿಯೇನೆಂದರೆ, ಮಾನವನು ತನ್ನ ಜೀವನವನ್ನು ಕುರಿತು ಚಿಂತಿಸುವುದು ಸಹಜವಾದ ಒಂದು ವಿಷಯ; ಆದರೆ ಕೆಲವರ ಚಿಂತನೆಗಳು ಆಳವಾಗಿರುತ್ತವೆ, ಪ್ರಭಾವಶಾಲಿಯಾಗಿರುತ್ತವೆ. ಇಡೀ ಸಮಾಜ ಅಂತಹ ಚಿಂತನೆಗಳನ್ನು ಸಾಮೂಹಿಕವಾಗಿ ಸ್ವೀಕರಿಸುತ್ತದೆ ಹಾಗೂ ಅನುಸರಿಸುತ್ತದೆ.

ಈಗ ಜೀವನವನ್ನು ಕುರಿತು ಈ ಪ್ರಶ್ನೆಯನ್ನು ಎತ್ತಿಕೊಳ್ಳೋಣ: ನಮ್ಮ ಜೀವನ ಯಾತಕ್ಕಾಗಿ? ಮೇಲುನೋಟಕ್ಕೆ ಇದೆಂತಹ ಅಸಂಬದ್ಧ ಪ್ರಶ್ನೆಯೆಯನಿಸಬಹುದು, ''ಹುಟ್ಟಿದ್ದೇವೆ. ಬದುಕಬೇಕು. ಉಸಿರಿರುವ ತನಕವೂ ಜೀವಿಸುವುದು ಅನಿ ವಾರ್ಯ. ಅದಕ್ಕಾಗಿ ನಮಗೆ ಅಗತ್ಯವಾದ ವಸ್ತುಗಳನ್ನು ದೊರಕಿಸಿಕೊಳ್ಳಬೇಕು. ಸಮಾಜದಲ್ಲಿ ಒಟ್ಟಾಗಿ ಬಾಳುವುದರಿಂದ, ನಮಗೆ ಕೆಲವೊಂದು ರೀತಿನೀತಿಗಳೂ, ನಿಯಮಗಳೂ ಅಗತ್ಯ ವಾಗಿದೆ'' ಎಂದು ಸುಲಭವಾಗಿ ಉತ್ತರಿಸಬಹುದು.

ಆದರೆ ಇಷ್ಟರಿಂದಲೇ ಮೇಲಿನ ಪ್ರಶ್ನೆಗೆ ಉತ್ತರಿಸಿದಂತಾಗಲಿಲ್ಲ. ಏಕೆಂದರೆ ಅದು ಮೂಲಭೂತ ಪ್ರಶ್ನೆ. 'ಹುಟ್ಟಿದ್ದೇವೆ. ಹಾಗಾಗಿ ಬದುಕಬೇಕು' ಎಂಬ ಉತ್ತರ ಪ್ರಾಣಿ-ಪಕ್ಷಿಗಳ, ಸಸ್ಯವರ್ಗಗಳ ಬದುಕಿಗಿಂತ ಹೆಚ್ಚಿನದೇನನ್ನು ನಮಗೆ ತಿಳಿಸಿಕೊಡುವುದು? ತಿನ್ನುವುದು, ನಿದ್ರಿಸುವುದು, ಸಂತಾನೋತ್ಪತ್ತಿ ಇವಿಷ್ಟೇ ಮಾಡಿದರೆ ಸಾಕು; ಇದಕ್ಕಿಂತ ಹೆಚ್ಚಿನದೇನೂ ನಮ್ಮ ಗುರಿಯಿಲ್ಲ ಎಂದು ಭಾವಿಸುವ ಜನ ಇಂದಿಗೂ ನಮ್ಮ ನಡುವೆ ಇದ್ದಾರೆ. ಆದರೆ ಮಾನವನಲ್ಲಿ ಬುದ್ಧಿ, ಅರಿವು, ಸಂಸ್ಕಾರ ಬೆಳೆದಂತೆ ಅವನ ಆಲೋಚನೆ ಕೂಡ ಉನ್ನತ ನೆಲೆಗೇರಿದೆ. ಬದುಕಿನಲ್ಲಿ ಉನ್ನತವಾದುದನ್ನು ಅರಿಯುವ, ಸಾಧಿಸುವ ಗುರಿ ಅವನದಾಗಿದೆ.

ಸಮಸ್ಯೆಯಿಲ್ಲದೆ ಬದುಕುವುದು, ಅಗತ್ಯವಾದ ವಸ್ತುಗಳನ್ನು ಪೂರೈಸಿಕೊಂಡು ನೆಮ್ಮದಿಯಿಂದ ಜೀವಿಸುವುದು, ಆದಷ್ಟು ಜೀವನದಲ್ಲಿ ಶಾಂತಿ, ಆನಂದಗಳನ್ನು ಕಂಡುಕೊಳ್ಳುವುದು — ಇವಿಷ್ಟೇ ಜೀವನದ ಗುರಿಯೆ? ಹಲವು ಬಾರಿ ಇವಿಷ್ಟನ್ನು ಹೊಂದುವುದೇ ಅತ್ಯಂತ ದುಸ್ತರವಾದಾಗ, ನಿರಾತಂಕ ಜೀವನ ನಡೆಸುವುದೇ ಜೀವನದ ಗುರಿಯೆನಿಸುತ್ತದೆ. ಆದರೆ ಅಂತಹ ಗುರಿಯನ್ನು ಹೇಗೋ ಸಾಧಿಸಿದ ನಂತರ, ಬದುಕಿನಲ್ಲಿ ಎಲ್ಲವೂ ಮುಗಿದುಹೋಯಿತೆ? — ಈ ಪ್ರಶ್ನೆ ಏಳಲೇಬೇಕು.

### ಶಾಶ್ವತ ಉತ್ತರ, ಪರಿಹಾರ

ಮನುಷ್ಯನಿಗೆ ಬಗೆಹರಿಸಲಾಗದ ಸಮಸ್ಯೆಗಳು ಅನೇಕ. ಅವುಗಳಲ್ಲಿ ಅಭೇದ್ಯವಾದ ರಹಸ್ಯವೇ ಸಾವು; ಸತ್ತ ಮೇಲೆ ಏನಾಗುವುದು ಎಂಬ ಪ್ರಶ್ನೆ ಅತ್ಯಂತ ಪ್ರಾಚೀನ ಕಾಲದಲ್ಲೇ ಮಾನವನನ್ನು ಕಾಡಿತು. ಅಂತೆಯೇ ಸುಃಖ-ದುಃಖಗಳೆಂಬ ಬಿಡಿಸಲಾಗದ ದ್ವಂದ್ವ; ಆಸೆ-ನಿರಾಸೆಗಳ ನಡುವಿನ ಡೋಲಾಯಮಾನ ಬದುಕು; ಸೋಲು-ಗೆಲುವಿನ ಎಡಬಿಡದೆ ಪೈಪೋಟಿ- ಇವೆಲ್ಲವೂ ಮಾನವನ ಮನಸ್ಸಿನಲ್ಲಿ ಹಲವು ಪ್ರಶ್ನೆಗಳನ್ನು ಹುಟ್ಟಿಸಿ

ದವು. ಉಪನಿಷತ್ತುಗಳಲ್ಲಿ, ಮುಂದೆ ಬೌದ್ಧ-ಜೈನ ಧರ್ಮಗಳಲ್ಲಿ, ಬಳಿಕ ಪುರಾಣಗಳಲ್ಲಿ ಈ ಬಗೆಯ ಜಿಜ್ಞಾಸೆ ಮುಂದುವರಿಯಿತು. ನಮ್ಮ ಜೀವನದಲ್ಲಿ ಕಣ್ಣಿಗೆ ಕಾಣುವ ಪ್ರಪಂಚದ ಹಿಂದೆ ಹಲವು ತತ್ತ್ವ, ನಿಯಮಗಳಿವೆ; ಅವುಗಳನ್ನು ಅರಿತು ಬದುಕಿದರೆ ಜೀವನಕ್ಕೆ ಅರ್ಥವಿರುವುದು ಕಂಡುಬರುತ್ತದೆ ಎಂದು ಅನೇಕ ಮಂದಿ ಮಹಾತ್ಮರು ಕಂಡುಕೊಂಡರು. ಇದರ ಪರಿಣಾಮವೇ ಧರ್ಮಗಳ ಉದಯ, ದರ್ಶನ-ತತ್ತ್ವಶಾಸ್ತ್ರಗಳ ಉಗಮ. ಮನುಷ್ಯನ ಜೀವನದ ಅರ್ಥವನ್ನು ಕಂಡುಕೊಳ್ಳುವಲ್ಲಿ ಇಂತಹ ಪರಂಪರೆ ಮಹತ್ವದ ಪಾತ್ರ ವಹಿಸಿತು. ಭಾರತದಲ್ಲಂತೂ ಧರ್ಮ, ಸಂಸ್ಕೃತಿಗಳು ಜೀವನದ ಅವಿಭಾಜ್ಯ ಅಂಗವೆಂಬಂತೆ ಬೆರೆತುಹೋದವು.

ಇಷ್ಟಾದರೂ ವೈಯಕ್ತಿಕ ಚಿಂತನೆ, ಆಲೋಚನೆಗಳು ಒಂದೊಂದು ನೆಲೆಯನ್ನು ಕಂಡುಕೊಂಡವು ಎನ್ನಲಾಗುವುದಿಲ್ಲ. ಒಬ್ಬೊಬ್ಬ ವ್ಯಕ್ತಿಯೂ ಅವನದೇ ಪ್ರಪಂಚವನ್ನು ಸೃಷ್ಟಿಸಿಕೊಳ್ಳುತ್ತಾನೆ. ಆ ಪ್ರಪಂಚದಲ್ಲಿ ಅವನು ಅರಸುವ ದಾರಿ, ಅವನು ಕಾಣುವ ಅರ್ಥ ಹಾಗೂ ಅವನಿಗೆ ಅವು ನೀಡುವ ಬೆಳಕು ಬೇರೆ ಬೇರೆ. ಹಲವು ಬಾರಿ ಬಿಕ್ಕಟ್ಟು, ಸಂಘರ್ಷಗಳಾಗುತ್ತವೆ; ಇನ್ನು ಹಲವೆಡೆ ಕೊಡುಕೊಳ್ಳುವಿಕೆ ನಡೆಯುತ್ತದೆ. — ಅನೇಕ ಬಾರಿ ಹಲವರು ಎಲ್ಲವೂ ಅರ್ಥಹೀನವೆಂದೂ ಹತಾಶೆಗೊಳಗಾಗುತ್ತಾರೆ. ಆದರೆ ಸಮಾಜದಲ್ಲಿ ಹಲವು ಮಂದಿ ಉತ್ತಮ ವಿದ್ಯಾಭ್ಯಾಸ, ಓದು, ಚಿಂತನೆಗಳಿಂದ ಶ್ರೇಷ್ಠ ವಿಚಾರಗಳನ್ನು ತಮ್ಮದಾಗಿಸಿಕೊಳ್ಳುತ್ತಾರೆ; ಇತರರಿಗೂ ಅದನ್ನು ಹಂಚುತ್ತಾರೆ. ಅಂತಹ ನಾಗರಿಕರಿಂದ ಸಮಾಜಕ್ಕೆ ಹೆಚ್ಚಿನ ಲಾಭವುಂಟಾಗುತ್ತದೆ.

## ಜೀವನ ದಾರಿಯ ಅನ್ವೇಷಣೆ

ಒಬ್ಬೊಬ್ಬ ವ್ಯಕ್ತಿ ಕೂಡ ತನ್ನ ಜೀವನವನ್ನು ಹೇಗೆ ರೂಪಿಸಿಕೊಳ್ಳುತ್ತಾನೆ ಎಂಬುದನ್ನು ಅವನವನ ಮಾನಸಿಕ ಬೆಳವಣಿಗೆ ನಿರ್ಧರಿಸುತ್ತದೆ. ಒಬ್ಬ ವ್ಯಕ್ತಿ ಕಲಿಯುವ ಅಂಶಗಳು ತನ್ನ ಸಮಾಜದ, ಒಟ್ಟು ಇತಿಹಾಸ ಕಲಿಸುವ ಜ್ಞಾನಪರಂಪರೆಗಳ ಹಾಗೂ ತನ್ನ ಆಂತರಿಕ ಬದುಕಿನಲ್ಲಿ ಕಂಡುಬಂದ ಅನುಭವಗಳ ಮೊತ್ತವಾಗಿರುತ್ತವೆ. ಅದಕ್ಕನುಗುಣವಾಗಿ ವ್ಯಕ್ತಿ ತನ್ನ ಗುರಿ ಇದು, ತನ್ನ ಬದುಕು ಈ ರೀತಿ ಇರಬೇಕು ಎಂದು ಭಾವಿಸುತ್ತ ತನ್ನ ಬದುಕನ್ನು ರೂಪಿಸಿಕೊಳ್ಳುತ್ತಾನೆ. ಇದರಲ್ಲಿ ಯಾರು ಯಾರು ಎಷ್ಟು ಸಫಲರಾಗುತ್ತಾರೆ, ಯಾರು ವಿಫಲರಾಗುವರು, ಇನ್ನೆಷ್ಟು ಮಂದಿ ಸನ್ನಿವೇಶದ ಬದಲಾವಣೆಗಳಿಗೆ ತಕ್ಕಂತೆ ತಮ್ಮ ಬದುಕನ್ನು ಬದಲಾಯಿಸಿಕೊಳ್ಳುವರು — ಇವೆಲ್ಲವೂ ಅತ್ಯಂತ ಸಂಕೀರ್ಣವಾದ ಸಮಾಜದಲ್ಲಿ ತೀರ ವಿಭಿನ್ನ ರೀತಿಯಲ್ಲಿ ನಡೆಯುತ್ತವೆ. ಬದುಕಿಗೂ ಚಿಂತನೆಗಳಿಗೂ ಸಂಬಂಧವೇ ಇಲ್ಲವೆನ್ನುವವರು ಮಾನವನ ಮಾನಸಿಕ ಬೆಳವಣಿಗೆಯ ಒಂದು ಮಹತ್ತರ ಹಂತವನ್ನು ಗಮನಿಸುವುದಿಲ್ಲ. ಮಾನವ ಕೇವಲ ಮೃಗವಲ್ಲ; ಮೃಗವನ್ನು ಅದರ ಇಂದ್ರಿಯಗಳು ಮುನ್ನಡೆಸುತ್ತವೆ. ಆದರೆ ಮಾನವನನ್ನು ಅವನ ಮನಸ್ಸು, ಬುದ್ಧಿ ಇವು ಮುನ್ನಡೆಸುತ್ತವೆ.

## ನಿತ್ಯದ ನೆಲೆಯ ದರ್ಶನ

ಮಾನವನ ಚಿಂತನೆಗಳು ಅನ್ವೇಷಣೆ ನಡೆಸುತ್ತ ಎಷ್ಟು ಕಾಲ ಮುಂದುವರಿಯುವುವು? ಅಗಾಧ ಅಂತರಿಕ್ಷದಲ್ಲಿ ಕೊನೆಯಿಲ್ಲದೆ ಸಾಗುವ ಗಗನನೌಕೆಯಂತೆ ಏನೇನನ್ನೋ ಕಾಣುತ್ತ, ಹಲವು ಅನುಭವಗಳನ್ನು ಹೊಂದುತ್ತ ಅನಂತಕಾಲ ಮಾನವನು ತನ್ನ ಮಾನಸಿಕ ಸ್ತರದಲ್ಲಿ ಮುಂದುವರಿಯುವನೆ?

ಇಲ್ಲವೆನ್ನುತ್ತದೆ ಭಾರತೀಯ ಪರಂಪರೆ. ನಮ್ಮ ಸಂಸ್ಕೃತಿ ಎಲ್ಲ ಪ್ರಶ್ನೆಗಳಿಗೂ ಉತ್ತರ ಅಧ್ಯಾತ್ಮದಲ್ಲಿದೆ ಎನ್ನುತ್ತದೆ. 'ಯಾವುದನ್ನು ತಿಳಿದರೆ ಎಲ್ಲವನ್ನೂ ತಿಳಿದುಕೊಳ್ಳಬಹುದೋ' — ಅದೇ ನಿಜವಾದ ಜ್ಞಾನ. ಅದನ್ನು ಅರಿತರೆ ಮಾನವನು ತನ್ನ ಎಲ್ಲ ಮಿತಿಗಳನ್ನೂ ದಾಟಿ ಹೋಗುವನು; ಸತ್ಯದ ಅಂತಿಮ ನೆಲೆಯನ್ನು ಅರಿಯುವನು. ಅದರ ನಂತರ ಅವನು ತಿಳಿಯಬೇಕಾದದ್ದು, ಅನುಭವಿಸಬೇಕಾದದ್ದು ಬೇರೇನೂ ಉಳಿಯದು. ಅವನು ಜನನ-ಮರಣಗಳ ಚಕ್ರದಿಂದ, ದ್ವಂದ್ವ ಜಗತ್ತಿನ ಗೊಂದಲಗಳಿಂದ, ಅಜ್ಞಾನದ ಆವರಣದಿಂದ ಮುಕ್ತನಾಗುವನು. ಪರಮ ಸತ್ಯದ ಬೆಳಕಿನಲ್ಲಿ ಅವನು ಮಿಂದೇಳುವನು. ಇದೇ ಮಾನವನು ತಲುಪಬಹುದಾದ ಅತ್ಯುನ್ನತ ನೆಲೆ. ಅದೇ ಪರಮ ಸತ್ಯದ ಸಾಕ್ಷಾತ್ಕಾರ. ಇಂತಹ ಸ್ಥಿತಿಯನ್ನು ಹೊಂದುವುದೇ ಮಾನವನ ಗುರಿ. ಬೇರೆ ಯಾವುದನ್ನು ಪಡೆದರೂ ಮಾನವನು ಪರಿಪೂರ್ಣನಾಗಲಾರ. ತನ್ನ ನೈಜ ಸ್ವರೂಪವಾದ ಆತ್ಮ ಅಥವಾ ಪರಬ್ರಹ್ಮವನ್ನು ಅರಿತಾಗಲೇ ಮಾನವ ಜೀವನವು ಸಾರ್ಥಕವಾಗುವುದು. ಈ ಅರ್ಥದಲ್ಲೇ ಶ್ರೀರಾಮಕೃಷ್ಣರು, ''ಭಗವಂತನ ಸಾಕ್ಷಾತ್ಕಾರವೇ ಮಾನವನ ಗುರಿ'' ಎಂದರು.

ಮಾನವನ ಗುರಿ ಎಂಬುದು ಸಮಾಜದಲ್ಲಿ ಯಾರೋ ಕೆಲವರಿಗೆ ಮಾತ್ರ ಇರಬಹುದಾದದ್ದು ಅಲ್ಲ; ಅದು ಪ್ರತಿಯೊಬ್ಬ ಮಾನವನೂ ಕಂಡುಕೊಳ್ಳಬೇಕಾದ ಆದರ್ಶ. ಇಂದು ಮಾನವನು ವಿಜ್ಞಾನ, ತಂತ್ರಜ್ಞಾನ, ಸಂಪರ್ಕ ಮಾಧ್ಯಮಗಳ ಪ್ರವಾಹದಲ್ಲಿ ಈ ಅತ್ಯುನ್ನತ ಆದರ್ಶವನ್ನು ಮರೆತಿದ್ದರೆ ಅದು ಅವನ ವೈಫಲ್ಯ ; ಆದರೆ ಮುಂದೆ ಅವು ನಿಜವಾದ ಗುರಿಯನ್ನು ಕಾಣ

### ಆಗಸ್ಟ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೪ | ಬುಧವಾರ | ಏಕಾದಶಿ |
| ೬ | ಶುಕ್ರವಾರ | ಸ್ವಾಮಿ ರಾಮಕೃಷ್ಣಾನಂದ ಜಯಂತಿ |
| ೧೮ | ಬುಧವಾರ | ಏಕಾದಶಿ |
| ೨೨ | ಭಾನುವಾರ | ಸ್ವಾಮಿ ನಿರಂಜನಾನಂದ ಜಯಂತಿ |
| ೩೦ | ಸೋಮವಾರ | ಶ್ರೀಕೃಷ್ಣ ಜನ್ಮಾಷ್ಟಮಿ |